ಮಾಡಿಕೊಳ್ಳುತ್ತ ಸಂಘದ ಮೇಲೆ ತನ್ನ ಹಿಡಿತ ಸಾಧಿಸಿ ಮುಂದಿನ ಬಾರಿ ಅಧ್ಯಕ್ಷನಾಗಬೇಕೆಂದು ಪಾಟೀಲಪ್ಪ ಹೊಂಚು ಹಾಕುತ್ತಿದ್ದ. ರುದ್ರಮುನಿ ತನ್ನ ಬಳಿ ಸಲಹೆ ಕೇಳಿದಾಗ ಗುರ್ಲಿಂಗನನ್ನು ದೂರಕ್ಕೆ ಅಟ್ಟುವ, ಜೊತೆಗೆ ರುದ್ರಮುನಿಯನ್ನು ಹೊಂಡಕ್ಕೆ ಕೆಡಹುವಂತಹ ಹೊಸ ಐಡಿಯಾಕ್ಕಾಗಿ ಪಾಟೀಲಪ್ಪ ಹುಡುಕಿಯೇ ಹುಡುಕಿದ. ಕೊನೆಗೂ, ಒಮ್ಮೆಯೂ ಉಪಯೋಗಕ್ಕೆ ಬಾರದಿದ್ದ ಸಂಘದ ಬೈಲಾ ಪುಸ್ತಕ ಈಗ ಪಾಟೀಲಪ್ಪನಿಗೊಂದು ಐಡಿಯಾ ಕೊಟ್ಟೇ ಬಿಟ್ಟಿತು.

ಸಂಘದ ಸದಸ್ಯನಾಗಬೇಕಾದರೆ ಆತ ಬಸವಾಪುರ ಪಟ್ಟಣದ ನಿವಾಸಿಯಾಗಿರಬೇಕು ಎಂದು ಬೈಲಾ ಹೇಳುತ್ತಿತ್ತು. ಸದಸ್ಯತ್ವದ ಅರ್ಜಿಯಲ್ಲಿ ಗುರ್ಲಿಂಗ ತನ್ನ ವಿಳಾಸವಾಗಿ ತನ್ನ ಅಪ್ಪ, ಅಮ್ಮ ಇನ್ನೂ ನೆಲೆಸಿದ್ದ ಸೂಡೂರಿನ ವಿಳಾಸ ನೀಡಿದ್ದ. ಸೂಡೂರಿನ ನಿವಾಸಿಯಾಗಿರುವ ಗುರ್ಲಿಂಗ ಸಂಘದ ಬೈಲಾ ಪ್ರಕಾರ ಸಂಘದ ಸದಸ್ಯನೇ ಅಲ್ಲ, ಆದ್ದರಿಂದ ಆತ ಚುನಾವಣೆಗೆ ನಿಲ್ಲುವಂತಿಲ್ಲ ಎಂದು ಪಾಟೀಲಪ್ಪ ರುದ್ರಮುನಿಗೆ ದಾರಿ ತೋರಿದ. ಇದನ್ನು ರುದ್ರಮುನಿ ತಾನೇ ನೇಮಿಸಿದ್ದ ಚುನಾವಣಾಧಿಕಾರಿ ಕುಮಾರಪ್ಪನಿಗೆ ತಿಳಿಸಿ ಗುರ್ಲಿಂಗನ ನಾಮಪತ್ರವನ್ನು ಅನರ್ಹಗೊಳಿಸುವಂತೆ ಹೇಳಿದ. ‘ಇದು ಸಾಧ್ಯವೇ ಇಲ್ಲ, ಗುರ್ಲಿಂಗ ಕಳೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದವ, ಆಗ ಅಡ್ಡಿಯಾಗದಿದ್ದ ಬೈಲಾ ಈಗ ಅಡ್ಡಿ ಎಂದು ಹೇಳುವುದು ಕಷ್ಟ’ ಎಂದು ಕುಮಾರಪ್ಪ ಹಿಂದೇಟು ಹಾಕಿದಾಗ, ‘ಇರಲಿ ಮಾರಾಯಾ, ಹಿಂದೆ ನೀನು ಸೂಚಿಸಿದ ನಿನ್ನ ಧರ್ಮೋದ್ಧಾರಕ ಸಂಘದ ಐದು ಜನರನ್ನು ಕನ್ನಡ ಸಂಘದ ಸದಸ್ಯರನ್ನಾಗಿ ಮಾಡುತ್ತೇನೆ’ ಎಂದು ಭರವಸೆ ನೀಡಿದ. ರುದ್ರಮುನಿಯ ಭರವಸೆಯಿಂದ ಈಗಾಗಲೇ ಧರ್ಮೋದ್ಧಾರದ ಉಮೇದಿನ ಬಹಳಷ್ಟು ನಿರ್ದೇಶಕರು ಕನ್ನಡ ಸಂಘದ ಒಳಗಿದ್ದು ತನ್ನ ಧರ್ಮೋದ್ಧಾರದ ಸಂಘದವರೂ ಇದರ ಒಳಗೆ ತೂರಿಕೊಂಡರೆ ಮುಂದೊಂದು ದಿನ ಇಡೀ ಕನ್ನಡ ಸಂಘ ಕೇಸರಿ ಬಣ್ಣದಿಂದ ಕಂಗೊಳಿಸುವುದನ್ನು ಊಹಿಸಿಕೊಂಡು ಸಂಭ್ರಮಿಸುತ್ತಲೇ ಕುಮಾರಪ್ಪ ಗುರ್ಲಿಂಗನ ನಾಮಪತ್ರವನ್ನು ಅನರ್ಹಗೊಳಿಸಿದ. ಕನ್ನಡ ಸಂಘಕ್ಕೆ ಎಂದಿನಂತೆ ಅವಿರೋಧ ಚುನಾವಣೆ ನಡೆದು ಮತ್ತೆ ರುದ್ರಮುನಿಯ ಹೌದಪ್ಪಗಳ ತಂಡ ಅಧಿಕಾರಕ್ಕೆ ಬಂದಿತು.

ತನ್ನ ನಾಮಪತ್ರವನ್ನೇ ತಿರಸ್ಕರಿಸಿ ಚುನಾವಣೆಯೇ ನಡೆಯದಂತೆ ಮಾಡುವ ರುದ್ರಮುನಿಯ ಕರಾಮತ್ತು ಗುರ್ಲಿಂಗನ ಊಹೆಗೆ ಮೀರಿದ ಸಂಗತಿಯಾಗಿತ್ತು. ತಾನು ಗೆಲ್ಲುವುದು ಅಸಾಧ್ಯವೆಂದು ಗುರ್ಲಿಂಗನಿಗೆ ಗೊತ್ತಿತ್ತು. ಆದರೆ ರುದ್ರಮುನಿಯ ಸರ್ವಾಧಿಕಾರಕ್ಕೆ ಸವಾಲು ಹಾಕುವುದೂ, ಅವಿರೋಧ ಆಯ್ಕೆಯ ಮೂಲಕ ಪ್ರತಿ ಬಾರಿಯೂ ಆತನ ಹೌದಪ್ಪಗಳ ತಂಡವೇ ಅಧಿಕಾರ ಹಿಡಿಯುವುದನ್ನು ವಿರೋಧಿಸುವುದೂ, ಚುನಾವಣೆ ನಡೆದು ಆಯ್ಕೆಯಾದ ಹೌದಪ್ಪಗಳಿಗೆ ರುದ್ರಮುನಿಯ ಮೇಲಿನ ಹಂಗು ಕಿಂಚಿತ್ತಾದರೂ ಕಡಿಮೆಯಾಗಿ ಅವರಿಗೆ ತಮಗೊಂದು ಮಿದುಳು ಇರುವುದು ಜ್ಞಾಪಕಕ್ಕೆ ತರಬೇಕು ಎನ್ನುವುದೂ ಗುರ್ಲಿಂಗ ಚುನಾವಣೆಗೆ ನಿಂತಿದ್ದರ ಹಿಂದಿನ ಹಿಡನ್ ಅಜೆಂಡಾಗಳಾಗಿತ್ತು. ಈಗ ಏನು ಮಾಡುವುದೆಂದು ತೋಚದೆ ಗುರ್ಲಿಂಗ ಚಡಪಡಿಸಿದ, ಚಡಪಡಿಕೆ ಹೆಚ್ಚಾಗಿ ಜ್ವರದಿಂದ ಬಳಲಿದ. ಇದೇ ವೇಳೆ ಗುರ್ಲಿಂಗನ ನಾಮಪತ್ರವನ್ನು ಅನರ್ಹಗೊಳಿಸಿದ ಸುದ್ದಿಯನ್ನು ಹೇಗೋ ತಿಳಿದ ಊರಿನ ಪ್ರಗತಿಪರ ಹೋರಾಟಗಾರ ತಿಪ್ಪಣ್ಣ ‘ಇಂತಹ ಕಾನೂನುಬಾಹಿರ ಚುನಾವಣೆ ನಡೆದಿದ್ದರೂ ಗುರ್ಲಿಂಗ ಯಾಕೆ ಸುಮ್ಮಿದ್ದಾನೆ? ಎಷ್ಟೆಂದ್ರೂ ಗುರ್ಲಿಂಗ ಅದೇ ಜಾತಿಯವನಲ್ಲವೇ? ಅವನ್ಯಾಗೆ ತಮ್ಮ ಜಾತಿಯವರನ್ನು ಬಿಟ್ಟುಕೊಡ್ತಾನೆ’ ಎಂದು ಲೇವಡಿ ಮಾಡಿದ.

ಗುರ್ಲಿಂಗ ಮಾತ್ರ ‘ತಿಪ್ಪಣ್ಣನಂತೆ ಯೋಚಿಸಿದ್ದರೆ ತಾನು ಈ ಸಂಘದ ಒಳಕ್ಕೆ ಬರಲಿಕ್ಕೆ ಸಾಧ್ಯವಿರುತ್ತಿರಲಿಲ್ಲ. ಕನ್ನಡ ಸಂಘವನ್ನು ಧರ್ಮೋದ್ಧಾರಕ ಸಂಘ ಎಂದು ಕುಟುಕುತ್ತ ದೂರವೇ ಉಳಿಯಬೇಕಾಗುತ್ತಿತ್ತು. ನಾನು ಇದರ ಒಳಗೆ ಬಂದು ಒಂದಷ್ಟು ಪ್ರಶ್ನೆಗಳನ್ನಾದರೂ ಎತ್ತಿದೆ, ಮಾದೇಶ ಒಬ್ಬನಾದರೂ ಸಂಘದ ಒಳಗೆ ಬರುವಂತಾಯ್ತು’ ಎಂದು ಯೋಚಿಸಿದ. ಇನ್ನೊಂದು ಕ್ಷಣ ‘ಇದರಿಂದೆಲ್ಲ ಏನು ಪ್ರಯೋಜನವಾಯಿತು, ತಿಪ್ಪಣ್ಣನಂತೆ ನಾನೂ ಕನ್ನಡ ಸಂಘದಿಂದ ದೂರವೇ ಉಳಿಯಬೇಕಿತ್ತು’ ಎಂದುಕೊಂಡ. ಮತ್ತೊಂದು ಕ್ಷಣ ತಿಪ್ಪಣ್ಣ ಹೇಳುವುದೂ ಸರಿಯೆನಿಸಿತು. ‘ಚುನಾವಣೆಯೇ ಅಕ್ರಮ ಎಂದರೆ ಅದು ಸಂವಿಧಾನಕ್ಕೇ ದ್ರೋಹ ಬಗೆದಂತೆ. ಕನ್ನಡ ಸಂಘದಲ್ಲಿ ನಡೆದ ಕಾನೂನುಬಾಹಿರ